# INTERNATIONAL INDIAN SCHOOL - DAMMAM

SA - 2 MARCH, 2016 TOTAL MARKS: 90

CLASS VIII THIRD LANGUAGE, KANNADA TIME: 3 Hrs.

**GENERAL INSTRUCTIONS:**

1. Read all questions carefully before answering.
2. All questions must be numbered correctly as in the question paper.

---

I ಅ) ಸರಿಯಾದ ಪದವನ್ನು ಆರಿಸಿ ಬಿಟ್ಟ ಸ್ಥಳವನ್ನು ತುಂಬಿಸಿರಿ: [ 1 X 10 = 10]

೧. ಯಾವ ಮನುಷ್ಯನೂ ____________ಜ್ಞಾನಿಯಲ್ಲ. [ ಅಪೂರ್ಣ, ಪೂರ್ಣ, ಪರಿಪೂರ್ಣ ]

೨. ಪಂಡಿತನು ಸಕಲ ಶಾಸ್ತ್ರ-ಪುರಾಣಗಳನ್ನು ______________ ಮಹಾ ಪಂಡಿತ. [ ಓದಿರುವ, ಊದಿರುವ, ಮೇದಿರುವ ]

೩. ______________ಕೆಲಸದಲ್ಲಿ ನಾ ಸೂತ್ರಧಾರ. [ದನಗಣತಿ, ಜನಗಣತಿ, ಮನೆಗಣತಿ]

೪. ಮತದಾರರ ತಲೆ ______________ ಬಂದಿರುವೆನಲ್ಲ. [ ಉಣಿಸಿ, ಎಣಿಸಿ, ತಣಿಸಿ ]

೫. ಕರ್ನಾಟಕದ ಆಡಳಿತ ಭಾಷೆ ________________. [ ತುಳು, ಕನ್ನಡ, ಕೊಂಕಣಿ ]

೬.ನಾನು ನಾಲ್ಕು ದಿನ ಕಳೆದ ಮೇಲೆ __________ ಗೆ ಬರುತ್ತೇನೆ. [ ಅರಮನೆ, ಸೆರೆಮನೆಗೆ, ನೆರೆಮನೆ]

೭.ಈಗ ಈ ಎರಡು ಗಿಣಿಗಳ _______ ಹೇಳು. [ ತಲೆ, ನೆಲೆ ,ಬೆಲೆ ]

೮. ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದವರಿಗೆ __________ ಪದಕವನ್ನು ನೀಡುತ್ತಾರೆ. [ ಬೆಳ್ಳಿಯ, ಚಿನ್ನದ ,ಕಂಚಿನ ]

೯. ಶಶಿಯಂಗಳದಿ ಭೂಮಿಯ _________ . [ ನೆರಳು, ಬೆರಳು, ಹರಳು ]

೧೦. __________ರಿಂದ ಕ್ರೀಡಾಕೂಟಗಳನ್ನು ಮತ್ತೆ ಆರಂಭಿಸಲಾಯಿತು. [ ೧೮೫೯, ೧೯೫೯,೧೭೫೯ ]

ಆ) ಈ ಕೆಳಗಿನ ಹತ್ತು ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ: [ 1 x 10 = 10]

೧. ೧೯೮೪ ರ ಒಲಂಪಿಕ್ ಕ್ರೀಡೆಗಳು ಎಲ್ಲಿ ನಡೆದವು?

೨. ಜನಗಣತಿದಾರ ಯಾರ ತಲೆ ಎಣಿಸುತ್ತಾನೆ?

೩. ರಾಹು - ಕೇತುಗಳನ್ನು ಯಾರಿಗೆ ಹೋಲಿಸಲಾಗಿದೆ?

೪. ಪಂಡಿತನು ಪಕ್ಕದ ಊರಿಗೆ ಹೇಗೆ ಹೋಗಬೇಕಾಗಿತ್ತು?

೫. ಮಕ್ಕಳು ಏನನ್ನು ಅರಿಯಬೇಕು?

೬. ವೈಯಕ್ತಿಕ ಕ್ರೀಡಾಸ್ಪರ್ಧೆಯಲ್ಲಿ ಎಷ್ಟು ಜನ ಭಾಗವಹಿಸಬಹುದು?

೭. ಅಂಬಿಗನು ಮೌನವಾಗಿದ್ದು ಏನು ಮಾಡುತ್ತಿದ್ದನು?

೮. ಜನಗಣತಿದಾರ ಎಷ್ಟು ಪ್ರಶ್ನೆಗಳನ್ನು ಕೇಳುತ್ತಾನೆ?

೯. ಒಲಂಪಿಕ್ ಕ್ರೀಡೆಗಳು ಎಷ್ಟು ದಿನಗಳ ಕಾಲ ನಡೆಯುತ್ತದೆ?

೧೦. ರಾಜನಿಗೆ ಯಾರು ಶಾಪ ಹಾಕಿದರು?

೧೧. ರಾಜನಿಗೆ ಯಾರ ಮೇಲೆ ಪ್ರೀತಿ ಉಂಟಾಯಿತು?

ಇ) ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ: [ ½ X 10 = 5 ]

| | |
|---|---|
| ೧ ತಿರುಳನು | ಜ್ಞಾನ |
| ೨. ಕರ್ನಾಟಕ | ಗ್ರೀಸ್‌ನಲ್ಲಿ ಆರಂಭ |
| ೩. ಒಲಂಪಿಯಾ | ನನ್ನ ಅವತಾರ |
| ೪. ಸತ್ಯವಾದ | ಪಂಡಿತ |
| ೫. ಆದರೂ ಬೇಡುವೆನು | ತಿಳಿಯುತ |
| ೬. ಒಲಂಪಿಕ್ ಕ್ರೀಡೆಗಳು | ಬೆಂಗಳೂರು |
| ೭. ಪಡೆಯಿರಿ | ನಗರ |
| ೮. ಗಿಣಿಗಳು | ಮಾತುಗಳು |
| ೯. ಹತ್ತು ವರ್ಷಕ್ಕೊಮ್ಮೆ | ನಿಮ್ಮ ಸಹಕಾರ |
| ೧೦. ಮೂರ್ಖ | ಬೆಲೆ ಹೇಳು |

II. ಅ) ಈ ಕೆಳಗಿನ ಹತ್ತು ಪದಗಳ ಅರ್ಥ ಬರೆಯಿರಿ: [ ½ X 10 = 5 ]

೧. ಇಮ್ಮಡಿ ೨. ಅವಶೇಷ ೩. ಬಾಧಕ ೪. ಕ್ರೀಡಾಂಗಣ ೫. ಶಶಿ ೬. ಇರುಳು

೭. ಪಂಡಿತ ೮. ರಕ್ಕಸರು ೯. ಅಂತರ ೧೦. ಅಂಬಿಗ ೧೧. ಪತನ

ಆ) ಈ ಕೆಳಗಿನ ಐದು ಪದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ: [1 X 5 = 5 ]

೧. ಸೂರ್ಯ ೨. ಕೆಲಸ ೩. ಕಟ್ಟು ೪. ಗುಟ್ಟು

೫. ಸಂಚಾರ ೬. ತಾಳ್ಮೆ

ಇ) ಬಿಟ್ಟ ಸ್ಥಳ ತುಂಬಿಸಿ: [1 X 6 = 6 ]

೧. ಕರ್ನಾಟಕದ ನಾಡಗೀತೆ ________________.

೨. ವಿಚಾರ + ವಂತ = ________________.

೩. 'ಪ್ರಶ್ನೆಗಳು' ಪದದ ಏಕವಚನ ರೂಪ ಬರೆಯಿರಿ:

೪. ಪುಸ್ತಕವನ್ನು - ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ __________

೫. ಒಲಂಪಿಕ್ ಕ್ರೀಡಾಕೂಟಗಳು ____________ ವರ್ಷಗಳಿಗೊಮ್ಮೆ ನಡೆಯುತ್ತವೆ.

೬. ________+ ವಂತ = ಗುಣವಂತ

ಈ) ಈ ವಾಕ್ಯಗಳು ಸರಿ/ ತಪ್ಪು ಎಂದು ಗುರುತಿಸಿ ಬರೆಯಿರಿ: [ 1 X 3 = 3 ]

೧. ತಿರುಳನು ತಿಳಿಯುತ ಪಡೆಯಿರಿ ಜ್ಞಾನ.

೨. ಸೂರ್ಯನಿಗೆದುರು ಸೂರ್ಯನು ಬರಲು.

೩. ಬೇಟೆಗಾರನ ಬಳಿ ನಾಲ್ಕು ಗಿಣಿಗಳಿದ್ದವು.

ಉ) ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ: [ 1 X 3 = 3 ]

೧. ಜೀವನ, ಬಾಳು, ಹೋಳು, ಬದುಕು

೨. ಕತ್ತಲು, ರಾತ್ರಿ, ಇರುಳು, ಹಗಲು

೩. ಕೆಲಸ, ಕಠಿಣ, ಕಾರ್ಯ, ಉದ್ಯೋಗ

ಊ) ಕನ್ನಡ ಸಂಖ್ಯೆ ಮತ್ತು ಸಂಖ್ಯಾನಾಮಗಳನ್ನು ಬರೆಯಿರಿ: [ 1 X 4 = 4 ]

1) 100 - ____ ________ 2) 89 - ______ _______

3) 47 - ____ _________ 4) 35 - ____ ________

III. ಅ) ಈ ಮಾತನ್ನು ಯಾರು ಯಾರಿಗೆ ಹೇಳಿದರು: [4 MARKS ]

೧. "ಈಗ ಈಜು ಕಲಿಯದ ನೀವೇ ಕಲಿಯದ ನೀವೇ ಮೂರ್ಖರಾದಿರಿ".( 1 ½ )

೨. "ಹಾಗಾದರೆ ಇವುಗಳನ್ನು ನಾನೇ ಕೊಳ್ಳುತ್ತೇನೆ". (1 )

೩. "ಹಾಗಾದರೆ ನೀನು ವೇದಾಂತ ಉಪನಿಷತ್ತುಗಳ ಬಗ್ಗೆ ಏನು ತಿಳಿದಿಲ್ಲವೇ?" (1 ½ )

ಆ) ಈ ಪದ್ಯಭಾಗಗಳನ್ನು ಪೂರ್ತಿಗೊಳಿಸಿರಿ: [3 ½ MARKS ]

i ) ಹಲವಾರು _________ _________ ___________

___________ __________ ___________ ನನಗೆ

ಬೇಸರಿಸದಿರಿ _________ ___________ _________

__________ ___________ ________ ಮನೆಗೆ

ii) ಈ ಪದ್ಯ ಬರೆದ ಕವಿ ______________________

ಇ) ಈ ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿ: [ 1 X 3 = 3]

೧. ಬಹುಮಾನ ೨. ಪಂಜರ ೩. ಮಾರಾಟ

**ಈ) ಈ ಸಾಲುಗಳನ್ನು ಸರಿಪಡಿಸಿ ಬರೆಯಿರಿ: [ 1 X 2 = 2 ]**

೧. ಬರದು ಬಿಕ್ಕಟ್ಟು ಬಾಧಕವು ಏನಿಲ್ಲ

೨. ನಿಮಗಿಲ್ಲ ಕಟ್ಟು ಹೇಳಿದ್ದೇ ಬರೆಯುವೆನು

IV. ಅ) ಸೂಕ್ತ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ವಾಕ್ಯ ಪೂರ್ತಿಗೊಳಿಸಿರಿ: [1 X 3 = 3]

೧. ಈ ಪುಸ್ತಕ _________ ಎಷ್ಟು ಚಿತ್ರಗಳಿವೆ?

೨. ಗೋಪಾಲ_ ಪಾಠ ಓದಿದನು.

೩. ನೀವು ಮೈದಾನ__ ಹೋಗಿ ಆಡಿಕೊಳ್ಳಿ.

ಆ) ಈ ಕೆಳಗಿನ ಪದಕ್ಕೆ ಪ್ರಥಮಾ, ತೃತೀಯಾ, ಸಪ್ತಮಿ ವಿಭಕ್ತಿ ಪ್ರತ್ಯಯ ಸೇರಿಸಿ ಬರೆಯಿರಿ: [3 MARKS]

೧. ಗಿಡ

ಇ) ಈ ಕೆಳಗಿನ ವಾಕ್ಯಗಳ ಕಾಲವನ್ನು ಬರೆಯಿರಿ: [1 X 3 = 3]

೧. ವಿದ್ಯಾರ್ಥಿಗಳು ಶಾಲೆಗೆ ಹೋಗುತ್ತಾರೆ.

೨. ಮಕ್ಕಳು ಮೈದಾನಕ್ಕೆ ಹೋಗುವರು.

೩. ರವಿಯು ಮೈದಾನಕ್ಕೆ ಬಂದಿದ್ದನು.

ಈ) ಕೆಳಗಿನ ವಾಕ್ಯಗಳನ್ನು ಭವಿಷ್ಯತ್ ಕಾಲಕ್ಕೆ ಬದಲಾಯಿಸಿ: [ 1 X 3 = 3 ]

೧. ಭೀಮನು ನದಿಯಲ್ಲಿ ಈಜಿದನು.

೨. ಮೋಹನನು ಕ್ರಿಕೆಟ್ ಆಡಿದನು.

೩. ಸುಮಾ ಗಿಡಗಳನ್ನು ನೆಟ್ಟಳು.

V . ಕೆಳಗಿನ ಮೂರು ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: [2 ½ X 3 = 7 ½ ]

೧. ೧೯೮೪ ರಲ್ಲಿ ಅಮೇರಿಕೆಯಲ್ಲಿ ನಡೆದ ಒಲಂಪಿಕ್ ಕ್ರೀಡಾಕೂಟ ಹೇಗಿತ್ತು?

೨. ಒಂದು ಗಿಣಿಯಲ್ಲಿ ಕೆಟ್ಟಗುಣ ಇನ್ನೊಂದು ಗಿಣಿಯಲ್ಲಿ ಒಳ್ಳೆಯ ಗುಣ ಬರಲು ಕಾರಣವೇನು?

೩. ಪಂಡಿತನು ಎಲ್ಲರ ಮುಂದೆ ತನ್ನ ಬಗ್ಗೆ ಏನೆಂದು ಹೇಳಿಕೊಳ್ಳುತ್ತಿದ್ದನು?

೪. ಒಲಂಪಿಕ್ ಜ್ಯೋತಿ ಎಂದರೇನು? ಇದನ್ನು ಯಾವಾಗಿನಿಂದ ಮತ್ತು ಎಲ್ಲಿಂದ ಪ್ರಾರಂಭಿಸಲಾಯಿತು?

೫. ಐದು ರೂಪಾಯಿ ಗಿಣಿ ಏನೆಂದು ಶಾಪ ಹಾಕಿತು?

**VI. ಗದ್ಯಭಾಗವನ್ನು ಓದಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳನ್ನು ಉತ್ತರಿಸಿರಿ: [7 MARKS]**

'ಕಡಲ ತೀರದ ಭಾರ್ಗವ' ಎಂದು ಪ್ರಖ್ಯಾತಿಯನ್ನು ಪಡೆದ ಶಿವರಾಮ ಕಾರಂತರು ಉಡುಪಿ ಜಿಲ್ಲೆಯ ಕೋಟ ಎಂಬಲ್ಲಿ ೧೯೦೨ರ ಅಕ್ಟೋಬರ್ ೧೦ರಂದು ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಇವರ ತಂದೆ ಶೇಷ ಕಾರಂತರು ,ತಾಯಿ ಲಕ್ಶ್ಮೀ ಕಾರಂತರು. ೯ ಮಕ್ಕಳ ಕುಟುಂಬದಲ್ಲಿ ಶಿವರಾಮ ಕಾರಂತರು ನಾಲ್ಕನೇಯ ಮಗ. ಶಿವರಾಮ ಕಾರಂತರ ಅಣ್ಣ ಮದರಾಸ ಸರಕಾರದಲ್ಲಿ ಸಚಿವರಾಗಿದ್ದರು. ಇನ್ನೊಬ್ಬ ಅಣ್ಣ ವಾಸುದೇವ ಕಾರಂತರು ಲೇಖಕರೂ ,ಆದ್ಯಾತ್ಮ ವಿಷಯಗಳಲ್ಲಿ ಪ್ರಸಿದ್ಧಿಯನ್ನು ಪಡೆದಿದಾರೆ.

ಶೇಷ ಕಾರಂತರು ಶಾಲಾ ಶಿಕ್ಷಕರಾಗಿದ್ದು ದೊಡ್ಡ ಕುಟುಂಬವನ್ನು ಸಾಕಲು ಅಸಾಧ್ಯವಾದಾಗ ಕೆಲಸ ಬಿಟ್ಟು ಜವಳಿ ಅಂಗಡಿ ಆರಂಭಿಸಿದರು. ಇಂಗ್ಲೀಷರನ್ನು ಕಂಡರೆ ಅಸಹ್ಯಪಡುತಿದ್ದ ಕಾಲದಲ್ಲಿ ಶೇಷರು ಅವರ ಮಕ್ಕಳನ್ನು ಇಂಗ್ಲೀಷ್ ಶಾಲೆಗೆ ಕಳುಹಿಸಿದರು. ಕುಂದಾಪುರದ ಶಾಲೆಯಲ್ಲಿ ೧೯೨೦ ರಲ್ಲಿ ಶಿವರಾಮ ಕಾರಂತರು ತಮ್ಮ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಬರೆದು ಮುಗಿಸಿದರು. ತಮ್ಮ ಶಾಲೆಯಲ್ಲಿ ರಂಗರಾಯರು ಕಾರಂತರ ಮೊದಲ ಗುರುಗಳಾಗಿ ಕಾರಂತರಿಗೆ ಬೆಂಬಲ ನೀಡಿದರು. ಮುದ್ದಣ ಕವಿಯ ಗುರುವಾಗಿದ್ದ ಮಳಲಿ ಸುಬ್ಬರಾಯರು ಸಹ ಶಿವರಾಮ ಕಾರಂತರಿಗೆ ಗುರುವಾಗಿದ್ದರು. ಮಳಲಿ ಸುಬ್ಬರಾಯರು ಮೂಲತ: ಯಕ್ಷಗಾನ ರಚನೆ ಮಾಡಬಲ್ಲವರಾಗಿದ್ದು ಯಕ್ಷಗಾನದ ಬಗ್ಗೆ ಶಿವರಾಮರಿಗೆ ಆಸಕ್ತಿ ಮೂಡಲು ಮುಖ್ಯ ಕಾರಣರಾದರು.

ಶಿವರಾಮ ಕಾರಂತರಿಗೆ ಪರಿಸರವೆಂದರೆ ಬಹಳ ಪ್ರೀತಿ. ಅವರು ಬಾಲ್ಯದಲ್ಲಿ ಕೆರೆಗಳನ್ನು ಏರಿ,ಸಮುದ್ರತೀರ,ಮರದ ನೆರಳಿನ ಪ್ರದೇಶಗಳಲ್ಲಿ ಸಮಯವನ್ನು ಕಳೆಯುತ್ತಿದ್ದರು. ಆಧುನಿಕ ವಿದ್ಯಾಭ್ಯಾಸ ಕೇವಲ ಹೊಟ್ಟೆಪಾಡಿಗಾಗಿ ಎನ್ನುವುದು ಅವರ ಅಭಿಪ್ರಾಯ. ನಿಜವಾದ ವ್ಯಕ್ತಿತ್ವದ ವಿಕಸನವಾದರೆ ಅದೇ ನಿಜವಾದ ಶಿಕ್ಷಣವೆನ್ನುವುದು ಅವರ ಅಭಿಪ್ರಾಯವಾಗಿತ್ತು. ೧೯೨೦ರಲ್ಲಿ ಗಾಂಧೀಜಿಯವರು ಸ್ವತಂತ್ರ ಹೋರಾಟದಲ್ಲಿ ಶಾಲಾ ಮಕ್ಕಳು ಬಾಗವಹಿಸ ಬೇಕೆಂದು ಕರೆಕೊಟ್ಟಾಗ ಕಾರಂತರೂ ಚಳವಳಿಯಲ್ಲಿ ಭಾಗವಹಿಸಿದ್ದರು.

ಪ್ರಶೆಗಳು :

೧. ಶಿವರಾಮ ಕಾರಂತರು ಎಲ್ಲಿ ಮತ್ತು ಯಾವಾಗ ಜನಿಸಿದರು?

೨. ಶಿವರಾಮ ಕಾರಂತರು ______________ಎಂದು ಪ್ರಖ್ಯಾತಿಯನ್ನು ಪಡೆದಿದ್ದರು.

೩. ___________ರಲ್ಲಿ ಗಾಂಧೀಜಿಯವರು ಸ್ವತಂತ್ರ ಹೋರಾಟದಲ್ಲಿ ಶಾಲಾ ಮಕ್ಕಳು ಬಾಗವಹಿಸ ಬೇಕೆಂದು ಕರೆಕೊಟ್ಟರು.

೪. ಶಿವರಾಮ ಕಾರಂತರ ತಂದೆ- ತಾಯಿಯ ಹೆಸರೇನು?

೫. ಕುಂದಾಪುರದ ಶಾಲೆಯಲ್ಲಿ ________________ ರಲ್ಲಿ ಶಿವರಾಮ ಕಾರಂತರು ತಮ್ಮ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಬರೆದು ಮುಗಿಸಿದರು.

೬. ಶಿವರಾಮ ಕಾರಂತರಿಗೆ ___________ ಬಹಳ ಪ್ರೀತಿ.

೭. ಶಿವರಾಮ ಕಾರಂತರ ಅಣ್ಣ ಯಾವ ಸರಕಾರದಲ್ಲಿ ಸಚಿವರಾಗಿದ್ದರು..